Date: 09-09-2024 OS No. 73/2021

( PW - 1 )

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲುಃ 1 ಮತ್ತು 2ನೇ ಪ್ರತಿವಾದಿಯರ ಪರ ಶ್ರೀ.ಪಿ.ಆರ್.ಸಿ. ವಕೀಲರಿಂದಃ**

ನಾನು ಬಿ.ಕಾಂ ಪದವಿ ಓದಿದ್ದೇನೆ. ನಮ್ಮ ಮನೆತನದ ಮೂಲ ಪುರುಷ ನನ್ನ ಅಜ್ಜ ಬಾಳಪ್ಪ ಶಿಕ್ಷಕ ಅಂತ ಸುಮಾರು 40 ವರ್ಷ ಎಸ್.ಡಿ.ವಿ.ಎಸ್. ಸಂಸ್ಥೆ ಸಂಕೇಶ್ವರದಲ್ಲಿ ಕೆಲಸ ಮಾಡಿದ್ದಾರೆ ಅಂದರೆ ನಿಜ. ನನ್ನ ಅಜ್ಜಿಯ ಹೆಸರು ಪ್ರೇಮ ಬಾಳಪ್ಪ ರವದಿ ಇರುತ್ತದೆ ಎಂದರೆ ನಿಜ. ನನ್ನ ಅಜ್ಜ ಮತ್ತು ಅಜ್ಜಿಗೆ 1) ಅಶೋಕ, 2) ಅಪ್ಪಾಸಾಹೇಬ, 3) ವಿಜಯ ಕುಮಾರು ಮತ್ತು 4) ರಾಜಕುಮಾರ ಅಂತ ನಾಲ್ಕು ಜನ ಗಂಡು ಮಕ್ಕಳು ಎಂದರೆ ನಿಜ. ಅದೆ ರೀತಿ ಅವರಿಗೆ ಶಶಿಕಲ ಅನ್ನುವ ಒಬ್ಬ ಹೆಣ್ಣು ಮಗಳು ಇದ್ದಳು ಎಂದರೆ ನಿಜ. ನನ್ನ ತಂದೆ ಅಶೋಕ ಎಸ್.ಡಿ.ವಿ.ಎಸ್. ಸಂಸ್ಥೆ ಯಾದಗೂಡದಲ್ಲಿ ಉಪನ್ಯಾಸಕರು ಅಂತ ಕೆಲಸ ಮಾಡಿದ್ದರು ಎಂದರೆ ನಿಜ. ನನ್ನ ಕಾಕ ಅಪ್ಪಾಸಾಹೇಬ ಮಲಪ್ರಭಾ ಗ್ರಾಮೀಣ ಬ್ಯಾಂಕಿನಲ್ಲಿ ಮ್ಯಾನೇಜರ್ ಅಂತ ಕೆಲಸ ಮಾಡಿ ನಿವೃತ್ತಿಯಾಗಿದ್ದಾರೆ ಎಂದರೆ ನಿಜ. ನನ್ನ ಕಾಕ ವಿಜಯಕುಮಾರ ಕಳೆದ 2 ವರ್ಷದಿಂದ ಎಸ್.ಡಿ.ವಿ.ಎಸ್. ಸಂಘದ ಪಧಾಧಿಕಾರಿ, ಅರ್ಬನ್ ಬ್ಯಾಂಕ್ ಹುಕ್ಕೇರಿ ಪಧಾಧಿಕಾರಿ ಅಂತ ಇರುತ್ತಾರೆ ಎಂದರೆ ನಿಜ. ನನ್ನ ಇನ್ನೊಬ್ಬ ಕಾಕ ರಾಜಕುಮಾರ ಸೀನಿಯರ್ ಇಂಜಿನಿಯರ್ ಆಗಿ ಕೆಲಸ ಮಾಡಿ ಮೃತ ಪಟ್ಟಿದ್ದಾರೆ ಎಂದರೆ ನಿಜ. ನನ್ನ ಅತ್ತೆ ಶಶಿಕಲ ಮದುವೆಯಾಗಿ ಬೆಳಗಾವಿಯಲ್ಲಿ ವಾಸವಾಗಿದ್ದಾರೆ ಎಂದರೆ ನಿಜ.

ನನ್ನ ತಂದೆ ಅಶೋಕ ನೌಕರಿಯಿಂದ ನಿವೃತ್ತಿಯಾದ ಮೇಲೆ ಒಕ್ಕಲುತನ ಮಾಡುತ್ತಾರೆ ಎಂದರೆ ವ್ಯಾಪಾರ ಮಾಡುತ್ತಾರೆ ಅಂತ ಸಾಕ್ಷಿ ಹೇಳುತ್ತಾರೆ. ನನ್ನ ತಂದೆ ಸುಮಾರು 30 ವರ್ಷಗಳ ಹಿಂದೆ ಸ್ವಯಂ ನಿವೃತ್ತಿ ಪಡೆದಿದ್ದಾರೆ. ಈಗ ವ್ಯಾಪಾರ ಮತ್ತು ವ್ಯವಸಾಯ ಎರಡನ್ನು ಮಾಡುತ್ತಾರೆ. ನನ್ನ ತಾಯಿಯ ಹೆಸರು ಅನ್ನಪೂರ್ಣ. ನನ್ನ ತಂದೆ-ತಾಯಿಗೆ ನಾನು ಒಬ್ಬನೆ ಮಗ ಇರುತ್ತೇನೆ.

ನಾನು ಈ ದಾವೆಯನ್ನು 25 ಎಕರೆ ಇರುವ ಒಂದು ಜಮೀನು, 4 ಮನೆಗಳು, ಒಂದು ಖಾಲಿ ಜಾಗೆಯಲ್ಲಿ ಪಾಲು ಬೇಡಿ ದಾಖಲಿಸಿದ್ದೇನೆ. ಈ ದಾವೆಯನ್ನು ನನ್ನ ತಂದೆ ದಾಖಲಿಸಿದ್ದು, ನಾನು ಅವರ ಪರವಾಗಿ ಒಟ್ಟು ಮುಕ್ತಿಯಾರನಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಈ ದಾವೆ ದಾಖಲಿಸಲು ಮಾಹಿತಿ ಕೊಡುವ ಕಾಲಕ್ಕೆ ನಾನು ನನ್ನ ತಂದೆಯ ಜೊತೆ ಹಾಜರಿದ್ದೆ. 25 ಎಕರೆ

ಜಮೀನಿನ ಸ.ನಂ.42 ಇದ್ದು, ಅದರಲ್ಲಿ ಈಗ 1 ರಿಂದ 6 ಹಿಸ್ಸೆಗಳಾಗಿವೆ. ಈ ದಾವೆ ದಾಖಲಿಸುವ ಕಾಲಕ್ಕೆ ದಾವೆದ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿ ಹಾಜರು ಮಾಡಿದ್ದೇವೆ ಎಂದರೆ ನಿಜ. ಸ.ನಂ.42/1 ಜಮೀನಿನ ಪಹಣಿಯಲ್ಲಿ ನನ್ನ ತಂದೆಯ ಹೆಸರಿನ ಜೊತೆ ನನ್ನ ತಾಯಿ ಹೆಸರು ಸಹ ಖಾತೆಯಾಗಿದೆ ಎಂದರೆ ನಿಜ. ಅದೆ ರೀತಿ ಸ.ನಂ.42/2ರ ಜಮೀನಿನ ಪಹಣಿಯಲ್ಲಿ ನನ್ನ ಕಾಕ ಅಪ್ಪಾಸಾಹೇಬನ ಹೆಸರಿನ ಜೊತೆ ಆತನ ಹೆಂಡತಿ ಮಹಾದೇವಿಯ ಹೆಸರು ಪಹಣಿಯಲ್ಲಿ ಖಾತೆಯಾಗಿದೆ ಎಂದರೆ ನಿಜ. ಅದೆ ರೀತಿ ಸ.ನಂ.42/3ರ ಜಮೀನಿನ ಪಹಣಿಯಲ್ಲಿ ನನ್ನ ಕಾಕ ವಿಜಯಕುಮಾರ ಹೆಸರಿನ ಜೊತೆ ಆತನ ಹೆಂಡತಿ ಶಿವಲೀಲ ಇವಳ ಹೆಸರು ಪಹಣಿಯಲ್ಲಿ ಖಾತೆಯಾಗಿದೆ ಎಂದರೆ ನಿಜ. ಅದೆ ರೀತಿ ಸ.ನಂ.42/4ರ ಜಮೀನಿನ ಪಹಣಿಯಲ್ಲಿ ನನ್ನ ಕಾಕ ರಾಜಕುಮಾರನ ಹೆಸರಿನ ಜೊತೆ ಆತನ ಹೆಂಡತಿ ಶಶಿಕಲ ಮತ್ತು ಆತನ ಮಗ ಅಕ್ಷಯ ಇವರ ಹೆಸರು ಪಹಣಿಯಲ್ಲಿ ಖಾತೆಯಾಗಿದೆ ಎಂದರೆ ನಿಜ. ಸ.ನಂ.42/5 ನನ್ನ ಅಜ್ಜ ಬಾಳಪ್ಪನ ಹೆಸರಿನಲ್ಲಿ ಇದೆ. ಸ.ನಂ.42/6 ನನ್ನ ಅಜ್ಜಿ ಪ್ರೇಮ ಮತ್ತು ನನ್ನ ಅತ್ತೆ ಶಶಿಕಲ ಇವರ ಹೆಸರಿಗೆ ಇದೆ. ದಾವೆದ ಆಸ್ತಿಗಳಲ್ಲಿ ಹೆಸರಿರುವ ನನ್ನ ತಾಯಿ ಅನ್ನಪೂರ್ಣ, ನನ್ನ ಚಿಕ್ಕಮ್ಮಂದಿರಾದ ಮಹಾದೇವಿ ಮತ್ತು ಶಿವಲೀಲ ಇವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ.

**ಮುಂದುವರೆದ ಪಾಟೀಸವಾಲು:** ವಕೀಲರ ಕೋರಿಕೆ ಮೇರೆಗೆ ಮುಂದೂಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.**